# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ | 677 |
| ಸದಸ್ಯರ ಹೆಸರು | ಶ್ರೀ.ಕೇಶವ ಪ್ರಸಾದ್ ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 13-12-2024 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೃಷಿ ಇಲಾಖೆಯಲ್ಲಿ ಯಂತ್ರೋಪಕರಣಗಳ ಪೂರೈಕೆಗೆ ಏಜೆನ್ಸಿಗಳ ಜೊತೆ ಸರ್ಕಾರ ಮಾಡಿಕೊಂಡಿರುವ ಒಪ್ಪಂದದ ವಿವರ ನೀಡುವುದು: ಏಜೆನ್ಸಿಗಳ ಯಂತ್ರೋಪಕರಣಗಳನ್ನು ಯಾವ ದರಕ್ಕೆ ಪೂರೈಸುತ್ತಿವೆ : ರಾಜ್ಯದ ರೈತರಿಗೆ ಸರ್ಕಾರ ರಿಯಾಯಿತಿ ದರದಲ್ಲಿ ವಿತರಿಸುವ ಯಂತ್ರೋಪಕರಣಗಳ ದರಗಳ ವಿವರ ನೀಡುವುದು. | ಕೃಷಿ ಇಲಾಖೆಯಲ್ಲಿ ಯಂತ್ರೋಪಕರಣಗಳ ಪೂರೈಕೆಗೆ ಏಜೆನ್ಸಿಗಳ (ಎಂಪ್ಯಾನೆಲ್ ಸಂಸ್ಥೆ) ಜೊತೆ ಸರ್ಕಾರ ಮಾಡಿಕೊಂಡಿರುವ ಒಪ್ಪಂದದ ನಮೂನೆಯನ್ನು ಅನುಬಂಧದಲ್ಲಿ ನೀಡಲಾಗಿದೆ.<br>ರಾಜ್ಯದ ರೈತರಿಗೆ ಸರ್ಕಾರ ರಿಯಾಯಿತಿ ದರದಲ್ಲಿ ವಿತರಿಸುವ ಯಂತ್ರೋಪಕರಣಗಳ ದರಗಳನ್ನು ಒಳಗೊಂಡಿರುವ ಎಂಪ್ಯಾನೆಲ್ ಪಟ್ಟಿಗಳನ್ನು ಸಿ.ಡಿಯಲ್ಲಿ ಅಡಕಗೊಳಿಸಲಾಗಿದೆ.<br>ಎಂಪ್ಯಾನೆಲ್ ಗೊಂಡ ಸಂಸ್ಥೆಗಳು, ಎಂಪ್ಯಾನೆಲ್ ಗೊಂಡ ಗರಿಷ್ಠ ದರದಲ್ಲಿ ರೈತರು ಚೌಕಾಸಿ ಮಾಡಿದ ದರಕ್ಕೆ ಪೂರ್ಣ ಮೊತ್ತವನ್ನು ಅಥವಾ ಸಹಾಯಧನ ಹೊರತು ಪಡಿಸಿದ ದರಕ್ಕೆ ಕೃಷಿ ಯಂತ್ರೋಪಕರಣಗಳನ್ನು ಪೂರೈಸುತ್ತಾರೆ.<br><br>ಸದರಿ ಎಂಪ್ಯಾನೆಲ್ಡ್ ಪಟ್ಟಿಯಲ್ಲಿರುವ ದರವು ಗರಿಷ್ಠ ದರವಾಗಿದ್ದು, ರೈತರ ಅನುಕೂಲಕ್ಕೆ ತಕ್ಕಂತೆ ಪ್ರಚಲಿತವಿರುವ ಮಾರುಕಟ್ಟೆಯ ದರಕ್ಕೆ ಚೌಕಾಸಿ ಮಾಡಿ ಯಂತ್ರೋಪಕರಣಗಳನ್ನು ಫಲಾನುಭವಿಗಳು ತಮ್ಮ ಹತ್ತಿರದ ರೈತ ಸಂಪರ್ಕ ಕೇಂದ್ರಗಳನ್ನು/ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯನ್ನು ಸಂಪರ್ಕಿಸಿ ನಿಯಮಾನುಸಾರ ಪಡೆಯಲು ಅವಕಾಶ ಮಾಡಿಕೊಡಲಾಗಿರುತ್ತದೆ.<br><br>ಮುಂದುವರೆದು, ರೈತರು ಸಹಾಯಧನ ಯೋಜನೆಗಳಡಿ ಖರೀದಿಸುವ ಯಂತ್ರೋಪಕರಣಗಳನ್ನು, ರೈತರ ಅನುಕೂಲಕ್ಕೆ ತಕ್ಕಂತೆ, ಯಂತ್ರೋಪಕರಣದ ಪೂರ್ಣ ಮೊತ್ತವನ್ನು / ರೈತರ ವಂತಿಕೆಯನ್ನು ಮಾತ್ರ ಪಾವತಿಸಿ ನಿಯಮಾನುಸಾರ ಖರೀದಿಸಲು ಅವಕಾಶವಿರುತ್ತದೆ. ಪೂರ್ಣ ಮೊತ್ತ ಪಾವತಿಸಿದ ರೈತರ ಖಾತೆಗೆ ಅಥವಾ ಸಹಾಯಧನ ಹೊರತುಪಡಿಸಿ ರೈತರ ವಂತಿಕೆ ಪಾವತಿಸಿದ ಪ್ರಕರಣಗಳಲ್ಲಿ ಸರಬರಾಜುದಾರ ಸಂಸ್ಥೆಗಳ ಖಾತೆಗೆ ಸಹಾಯಧನವನ್ನು ಪಾವತಿಸಲಾಗುವುದು. |
| ಆ) | ಈ ದರಗಳು ಮುಕ್ತ ಮಾರುಕಟ್ಟೆಯಲ್ಲಿ ದೊರೆಯುವ ಯಂತ್ರೋಪಕರಣಗಳ ಬೆಲೆಗೆ ಸಮನಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದಲ್ಲಿ, ದರ ಹೆಚ್ಚಳಕ್ಕೆ ಕಾರಣಗಳೇನು, | ಕೃಷಿ ಇಲಾಖೆಯಿಂದ ಯಂತ್ರೋಪಕರಣವಾರು, ಸಂಸ್ಥೆವಾರು ಎಂಪ್ಯಾನೆಲ್ ಗೊಂಡಿರುವ ದರಗಳು ಮುಕ್ತ ಮಾರುಕಟ್ಟೆಯಲ್ಲಿ ದೊರೆಯುವ ಯಂತ್ರೋಪಕರಣಗಳ ಬೆಲೆಗೆ ಸಮನಾಗಿರುವ ಹಾಗೂ ಸದರಿ ದರಗಳು ಮುಕ್ತ ಮಾರುಕಟ್ಟೆ ದರಕ್ಕಿಂತ ಹೆಚ್ಚಾಗಿರುವ ಕುರಿತು ಕೃಷಿ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ. |

| | | |
|---|---|---|
| ಇ) | ಏಜೆನ್ಸಿಗಳು ಸರ್ಕಾರಕ್ಕೆ ಮಾರುಕಟ್ಟೆ ಬೆಲೆಗಿಂತ ತುಂಬಾ ಹೆಚ್ಚಿನ ದರಕ್ಕೆ (ಎಂ.ಪೈನಲ್ಲ್) ಯಂತ್ರೋಪಕರಣಗಳನ್ನು ಪೂರೈಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಇದರಿಂದ ಸರ್ಕಾರಕ್ಕೆ ನಷ್ಟವುಂಟಾಗುತ್ತಿದ್ದು, ರೈತರಿಗೂ ಅನುಕೂಲವಾಗದಿರುವ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿದೆಯೇ: | ಏಜೆನ್ಸಿಗಳು ಸರ್ಕಾರಕ್ಕೆ ಮಾರುಕಟ್ಟೆ ಬೆಲೆಗಿಂತ ತುಂಬಾ ಹೆಚ್ಚಿನ ದರಕ್ಕೆ (ಎಂಪ್ಯಾನೆಲ್) ಯಂತ್ರೋಪಕರಣಗಳನ್ನು ಪೂರೈಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಕೃಷಿ ಇಲಾಖೆಯಲ್ಲಿ ಕೃಷಿ ಉಪಕರಣಗಳನ್ನು ಪಾರದರ್ಶಕವಾಗಿ ಸಹಾಯಧನ ಯೋಜನೆಗಳಡಿ ವಿತರಿಸುವ ಸಲುವಾಗಿ, ಕೇಂದ್ರ ಸರ್ಕಾರವು ನಿಗದಿಪಡಿಸಿರುವ ತಾಂತ್ರಿಕ ಮಾನದಂಡಗಳನ್ವಯ, ಕೇಂದ್ರ ಸರ್ಕಾರದ ಅನುಮೋದಿತ ಪರೀಕ್ಷಾ ಕೇಂದ್ರಗಳ ಪರೀಕ್ಷಾ ವರದಿ ಪರಿಗಣಿಸಿ, ಸಂಸ್ಥೆಗಳನ್ನು Request for Proposal (RfP) ಪ್ರಕ್ರಿಯೆ ಮೂಲಕ ಎಂಪ್ಯಾನಲ್ ಮಾಡಲಾಗುತ್ತಿದೆ. ಸದರಿ ಎಂಪ್ಯಾನೆಲ್ಡ್ ಪಟ್ಟಿಯಲ್ಲಿರುವ ದರವು ಗರಿಷ್ಠ ದರವಾಗಿದ್ದು, ರೈತರ ಅನುಕೂಲಕ್ಕೆ ತಕ್ಕಂತೆ ಪ್ರಚಲಿತವಿರುವ ಮಾರುಕಟ್ಟೆಯ ದರಕ್ಕೆ ಚೌಕಾಸಿ ಮಾಡಿ ಯಂತ್ರೋಪಕರಣಗಳನ್ನು ಫಲಾನುಭವಿಗಳು ತಮ್ಮ ಹತ್ತಿರದ ರೈತ ಸಂಪರ್ಕ ಕೇಂದ್ರಗಳನ್ನು/ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯನ್ನು ಸಂಪರ್ಕಿಸಿ ನಿಯಮಾನುಸಾರ ಪಡೆಯಲು ಅವಕಾಶ ಮಾಡಿಕೊಡಲಾಗಿರುತ್ತದೆ.<br><br>ಅಲ್ಲದೇ, ಇಲಾಖೆಯು ಕಾಲಕಾಲಕ್ಕೆ ಕೈಗೊಳ್ಳಲಾಗುವ ಎಂಪ್ಯಾನೆಲ್ ಪ್ರಕ್ರಿಯೆಯನ್ವಯ, ಒಂದು ವೇಳೆ ಯಾವುದಾದರು ಸಂಸ್ಥೆಯು, ಸಹಾಯಧನ ಯೋಜನೆಗಳಡಿ ಸರಬರಾಜು ಮಾಡಲಾಗುವ ಯಂತ್ರೋಪಕರಣದ ದರವು, ಮುಕ್ತ ಮಾರುಕಟ್ಟೆ ದರಕ್ಕಿಂತ ಹೆಚ್ಚಾಗಿರುವುದು ಸಾಬೀತಾದಲ್ಲಿ, ಅಂತಹ ಸಂಸ್ಥೆಗಳ ಯಂತ್ರೋಪಕರಣ ಮಾದರಿಗಳನ್ನು ಡಿ-ಎಂಪ್ಯಾನೆಲ್ ಅಥವಾ ಸಂಸ್ಥೆಯನ್ನು ಕಪ್ಪುಪಟ್ಟಿಗೆ ಸೇರಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. |
| ಈ) | ರೈತರಿಗೆ ರಿಯಾಯಿತಿ ದರದಲ್ಲಿ ಯಂತ್ರೋಪಕರಣಗಳನ್ನು ಪೂರೈಸಲು ಸರ್ಕಾರ ಕೈಗೊಂಡ ಕ್ರಮಗಳೇನು? | ರಾಜ್ಯದಲ್ಲಿ ರೈತರು ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು, ಕೃಷಿ ಕಾರ್ಮಿಕರ ಸಮಸ್ಯೆಯನ್ನು ನೀಗಿಸಿ, ಶ್ರಮದಾಯಕ ದುಡಿಮೆಯನ್ನು ತಗ್ಗಿಸಿ ಹಾಗು ಹೆಚ್ಚಿನ ಇಳುವರಿ ಪಡೆಯಲು ನೆರವಾಗುವಂತೆ ಸಹಕಾರಿಯಾಗಲು ಕೃಷಿ ಯಾಂತ್ರೀಕರಣ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ.<br><br>ಕೃಷಿ ಯಾಂತ್ರೀಕರಣ ಯೋಜನೆಯಡಿ ರೈತರಿಗೆ 45 PTO HP ವರೆಗಿನ ಸಣ್ಣ ಟ್ರ್ಯಾಕ್ಟರ್, ಪವರ್ ಟಿಲ್ಲರ್ ಜೊತೆಗೆ ಭೂಮಿ ಸಿದ್ಧತೆ ಉಪಕರಣಗಳು, ಬಿತ್ತನೆ/ನಾಟಿ ಮಾಡುವ ಉಪಕರಣಗಳು, ಶಕ್ತಿ ಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳು, ಶಕ್ತಿ ಚಾಲಿತ ಅಂತರ ಬೇಸಾಯ ಉಪಕರಣಗಳು, ಕೊಯ್ಲು ಮತ್ತು ಸಂಸ್ಕರಣಾ ಉಪಕರಣಗಳು, ತ್ಯಾಜ್ಯ ವಸ್ತುಗಳ ನಿರ್ವಹಣಾ ಉಪಕರಣಗಳು, ಅಂತರ ಬೇಸಾಯ ಉಪಕರಣಗಳು, ಡೀಸೆಲ್ ಪಂಪ್‌ಸೆಟ್ ಗಳು ಇತ್ಯಾದಿ ಕೃಷಿ ಯಂತ್ರೋಪಕರಣಗಳಿಗೆ ಸಹಾಯಧನ ಒದಗಿಸಲಾಗುತ್ತಿದೆ. ಹೀಗೆ ಉಳುಮೆಯಿಂದ ಕೊಯ್ಲಿನವರೆಗೆ ಹಾಗು ಕೊಯ್ಲು ನಂತರ ಉಪಯುಕ್ತವಾಗುವ ವಿವಿಧ ನಮೂನೆಯ ಕೃಷಿ ಉಪಕರಣಗಳನ್ನು ಸಹಾಯಧನದಡಿ ರೈತರಿಗೆ ಒದಗಿಸಲಾಗುತ್ತಿದೆ. |

ಸಂಖ್ಯೆ: AGRI/190/ASC/2024

**(ಎನ್. ಚಲುವರಾಯಸ್ವಾಮಿ)**
ಕೃಷಿ ಸಚಿವರು